**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಕ್ರಿಮಿನಲ್ ಮಿಸಲೆನಿಯಸ್. ನಂ. 708/2023**

| | | | |
|---|---|---|---|
| **ಹೆಸರು** | **:** | **ಅಂಬಿಕ** | ಪ್ರಾ.ಸಾ. 1 |
| **ಗಂಡನ ಹೆಸರು** | **:** | **ಗಣಪತಿ** | **ದಿನಾಂಕಃ 21-09-2024** |
| **ವಯಸ್ಸು** | **:** | **27 ವರ್ಷ** | |
| **ಉದ್ಯೋಗ** | **:** | **ಗೃಹಣಿ** | |
| **ವಾಸಸ್ಥಳ** | **:** | **ರಾಮತೀರ್ಥ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ SBK ವಕೀಲರಿಂದಃ</u>**

ಎದುರುದಾರ ನನ್ನ ಗಂಡ. ನನ್ನ ಮದುವೆ ಎದುರುದಾರನ ಜೊತೆ 23-03-2019 ರಂದು ರಾಮತೀರ್ಥ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ಮದುವೆ ಸಮಯಕ್ಕೆ ನನ್ನ ತಂದೆ ತಾಯಿ ಎದುರುದಾರನಿಗೆ 6 ಲಕ್ಷ ರೂಪಾಯಿ ನಗದು ಹಣ ಮತ್ತು 6 ತೊಲೆ ಬಂಗಾರ ನೀಡಿರುತ್ತಾರೆ.

ಮದುವೆಯಾದ ನಂತರ ಎದುರುದಾರ ನನಗೆ 1 ತಿಂಗಳ ಕಾಲ ಸರಿಯಾಗಿ ನೋಡಿಕೊಂಡಿರುತ್ತಾನೆ. ನಂತರ ಎದುರುದಾರ ನನಗೆ ತವರುಮನೆಯಿಂದ ಹಣ ಮತ್ತು ಬಂಗಾರ ತೆಗೆದುಕೊಂಡು ಬರಲು ಹೊಡೆಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರ ಹಾಕಿರುತ್ತಾನೆ. ಎದುರುದಾರ ನನ್ನ ಬೆನ್ನಿಗೆ, ತಲೆಗೆ ಹೊಡೆದಿರುತ್ತಾನೆ. ಜರುಗಿದ ಘಟನೆಯನ್ನು ನನ್ನ ತಂದೆ ತಾಯಿಗೆ ತಿಳಿಸಿರುತ್ತೇನೆ. ನನ್ನ ತಂದೆ ತಾಯಿ ನನಗೆ ಆದರೂ ಹೊಂದಿಕೊಂಡು ಹೋಗು ಎಂದು ಸಮಾಧಾನ ಮಾಡಿರುತ್ತಾರೆ. ಆದರೂ ಸಹ ಎದುರುದಾರ ನನಗೆ ಕಿರುಕುಳ ನೀಡುವುದು ನಿಲ್ಲಿಸಲಿಲ್ಲ. ನಂತರ ಎದುರುದಾರ ನನಗೆ ತನ್ನ ಮನೆಯಿಂದ ಹೊರ ಹಾಕಿರುತ್ತಾನೆ. ಆದ್ದರಿಂದ ನಾನು ಈಗ ನನ್ನ ತವರುಮನೆಯಲ್ಲಿ ವಾಸವಿದ್ದೇನೆ. ಎದುರುದಾರನಿಂದ ನನಗೆ ಜೀವದ ಅಪಾಯ ಇದೆ ಎಂದು ಪೋಲಿಸ ಠಾಣೆಗೆ ದೂರನ್ನು ಸಹ ನೀಡಿರುತ್ತೇನೆ. ಪೋಲಿಸ ಠಾಣೆಯಲೂ ಸಹ ಎದುರುದಾರ ನನಗೆ ತನ್ನ ಮನಗೆ ಕರೆದುಕೊಂಡು ಹೋಗಲು ಒಪಿರುವುದಿಲ್ಲ. ನನ್ನ ಗಂಡ ನನ್ನ ಖರ್ಚಿಗಾಗಿ ಯಾವುದೇ ಹಣ ನೀಡುತ್ತಿಲ್ಲ. ಎದುರುದಾರನ ಹೆಸರಿನಲ್ಲಿ 25 ಎಕರೆ ಜಮೀನು ಇದೆ, 5 ಮನೆಗಳು ಮತ್ತು ಖಾಲಿ ನಿವೇಶನಗಳು ಇವೆ.

ಎದುರುದಾರ ವ್ಯವಸಾಯ ಮಾಡುತ್ತಿದ್ದು ಅವನ ಹತ್ತಿರ ಟ್ರಾಕ್ಟರ ಸಹ ಇದೆ. ಎದುರುದಾರ ಪ್ರತಿ ತಿಂಗಳು 80 ಸಾವಿರ ಹಣ ಸಂಪಾದಿಸುತ್ತಾರೆ. ಎದುರುದಾರ 10ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದಾರೆ. ನಾನು 2ನೇ ಪಿಯುಸಿ ವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ.

ಆದ್ದರಿಂದ ಕನಿಷ್ಠ ಪ್ರತಿ ತಿಂಗಳಿಗೆ 30 ಸಾವಿರ ಎದುರುದಾರನಿಂದ ಜೀವನಾಂಶ ಕೊಡಲು ಆದೇಶಿಸಬೇಕೆಂದು ನ್ಯಾಯಾಲಯದಲ್ಲಿ ಕೋರಿಕೊಳ್ಳುತ್ತೇನೆ.

ಈಗ ನೋಡುತ್ತಿರುವ ಮದುವೆ ಆಮಂತ್ರಣ ಪತ್ರಿಕೆಯನ್ನು ನಿಪಿ-1 ಎಂದು, ದಿನಾಂಕಃ 08-11-2023 ರ ಕಾನೂನು ಸೂಚನಾ ಪತ್ರವನ್ನು ನಿಪಿ-2 ಎಂದು, 1 ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-3 ಎಂದು, ಮದುವೆ ಸಮಯಕ್ಕೆ ಪಡೆದ 3 ಭಾವಚಿತ್ರಗಳನ್ನು ನಿಪಿ-4 ರಿಂದ 6 ಎಂದು, 5 ನಮೂನೆ ಸಂಖ್ಯೆಃ 12 ಗಳನ್ನು ನಿಪಿ-7 ರಿಂದ 11 ಎಂದು, ಸರ್ವೆ ನಂ. 86/*/* ರ 2 ಪುಟಗಳಲ್ಲಿರುವ ಪಹಣಿ ಪತ್ರಿಕೆಗಳನ್ನು ನಿಪಿ-12 ಎಂದು, ಸರ್ವೆ ನಂ. 81/*/* ರ 1 ಪುಟದಲ್ಲಿರುವ ಪಹಣಿ ಪತಿರಕೆಯನ್ನು ನಿಪಿ-13 ಎಂದು, ಸರ್ವೆ ನಂ. 26/*/4 ರ 2 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-14 ಎಂದು, ಸರ್ವೆ ನಂ. 274/*/1 ರ 4 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-15 ಎಂದು ಮತ್ತು ಸರ್ವೆ ನಂ. 91/*/* ರ 2 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರನ ಪರ ಶ್ರೀ SSM ವಕೀಲರು ಸಮಯ ಕೋರಿದರಿಂದ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**